# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

[ಕರ್ನಾಟಕ ಸರ್ಕಾರದ ಸಂಪೂರ್ಣ ಸಾಮ್ಯಕ್ಕೆ ಒಳಪಟ್ಟಿದೆ]

Company Identity Number [CIN]: U31401KA2002SGC030437

## ನೇಮಕಾತಿ - ಸ್ಥಳ ನಿಯುಕ್ತಿಗಾಗಿ ಕೌನ್ಸಿಲಿಂಗ್

## ಅಧಿಸೂಚನೆ

ಪ್ರಕಟಣೆ ಸಂಖ್ಯೆ:ಹೆಸ್ಕಾಂ/ಪ್ರವ್ಯ[ಆ]/ಲೆ[ಆ]/ಸಲೆ[ಆ]/ಹಿಸ[ಆ]-1/ವಿವ-05/2016-17/**CYS-4267**, ದಿನಾಂಕ: **02ನೇ ಫೆಬ್ರವರಿ, 2019**.

ವಿಷಯ: ಹು.ವಿ.ಸ.ಕಂ.ನಿ.ಯಲ್ಲಿ ಕಿರಿಯ ಇಂಜನಿಯರ್ [**ವಿದ್ಯುತ್**], **ಸಹಾಯಕ** ಮತ್ತು **ಕಿರಿಯ** ಸಹಾಯಕ **ಹುದ್ದೆಗಳ ನೇಮಕಾತಿಗೆ** ಆಯ್ಕೆಯಾಗಿರುವ ಹುದ್ದೆಗಳ ನೇಮಕಾತಿಗೆ **ಆಯ್ಕೆಯಾಗಿರುವ ಅಭ್ಯರ್ಥಿಗಳ** ಸ್ಥಳ **ನಿಯುಕ್ತಿಗಾಗಿ ಕೌನ್ಸಿಲಿಂಗ್** ನಡೆಸುವ ಬಗ್ಗೆ.

ಉಲ್ಲೇಖ:
1. ಕವಿಪ್ರನಿನಿ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ ಬಿ16/ 40360/ 2016-17, **ದಿನಾಂಕ**: 08.09.2016.
2. ಅಂತಿಮ ಆಯ್ಕೆ [ಹೆಚ್ಚುವರಿ] ಪಟ್ಟಿ ಅಧಿಸೂಚನೆ ಸಂಖ್ಯೆ: ಹುವಿಸಕಂನಿ/ **ಪ್ರವ್ಯ**[ಆ]/ ಲೆ[ಆ]/ಸಲೆ[ಆ]/ ಹಿಸ[ಆ-1]/ **ನೇಪ್ರ/ ವಿವ**-05/ 2016-17/ ದಿನಾಂಕ: 31.10.2018.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಗಮ **ನಿಯಮಿತ**ದಲ್ಲಿ **ಕಿರಿಯ** ಇಂಜಿ**ನಿಯರ್** [ವಿದ್ಯುತ್], ಸಹಾಯಕ **ಮತ್ತು** ಕಿರಿಯ ಸಹಾಯಕ ಹುದ್ದೆಗೆ ಆಯ್ಕೆಯಾಗಿರುವ **ಅಭ್ಯರ್ಥಿಗಳ** ಅಂತಿಮ ಆಯ್ಕೆ ಪಟ್ಟಿ **[ಹೆಚ್ಚುವರಿ]** **ಯನ್ನು** ದಿನಾಂಕ: 31.10.2018 ರಂದು ಹು.ವಿ.ಸ.ಕಂ.ನಿ. ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿರುತ್ತದೆ.

ಸದರಿ ಅಂತಿಮ ಆಯ್ಕೆ ಪಟ್ಟಿಯನ್ವಯ ಆಯ್ಕೆಯಾಗಿರುವ ಕಿರಿಯ ಇಂಜಿನಿಯರ್ [**ವಿದ್ಯುತ್**], ಸಹಾಯಕ ಮತ್ತು ಕಿರಿಯ **ಸಹಾಯಕ ಅಭ್ಯರ್ಥಿಗಳ ಸ್ಥಳ ನಿಯುಕ್ತಿಗಾಗಿ, ದಿನಾಂಕ: 08.02.2019** ರಂದು ಬೆಳಿಗ್ಗೆ **11:00** ಗಂಟೆಗೆ ಕೌನ್ಸಿಲಿಂಗ್ **ನಡೆಸಲಾಗುತ್ತಿರುವು**ದರಿಂದ, ಅಭ್ಯರ್ಥಿಗಳು ತಮ್ಮ ಮೂಲ ಗುರುತಿನ ಚೀಟಿ [ಆಧಾರ್ ಕಾರ್ಡ್ / ವೋಟರ್ **ಕಾರ್ಡ್** / ಚಾಲನಾ ಪರವಾನಗಿ / ಪಾಸ್ ಪೋರ್ಟ್ / ಪ್ಯಾನ್ ಕಾರ್ಡ್] ಹಾಗೂ ಗುರುತಿನ ಚೀಟಿಯ ಸ್ವ-ದೃಢೀಕೃತ ಪ್ರತಿಯೊಂದಿಗೆ, ಕಂಪನಿ **ಕಾರ್ಯಾಲಯ, ಹು.ವಿ.ಸ.ಕಂ.ನಿ.,** ನವನಗರ**, ಹುಬ್ಬಳ್ಳಿ 580 025** ಇಲ್ಲಿ ತಪ್ಪದೆ ಹಾಜರಾಗಲು ತಿಳಿಸಿದೆ.

ಕೌನ್ಸಿಲಿಂಗ್ ಗಾಗಿ ಅಂತಿಮ ಪಟ್ಟಿ [ಹೆಚ್ಚುವರಿ] ಯಲ್ಲಿ **ಆಯ್ಕೆ**ಯಾಗಿರುವ ಅಭ್ಯರ್ಥಿಗಳ **ಮೆರಿಟ್** ಅನುಸಾರ ಹಾಗೂ ಹು.ವಿ.ಸ.ಕಂ.ನಿ. ಯ ಲೆಕ್ಕ ಘಟಕಗಳಿಗೆ ಅವಶ್ಯಕತೆ ಆಧಾರದ ಮೇಲೆ ಸ್ಥಳ **ನಿಯುಕ್ತಿಗೆ ಕೌನ್ಸಿಲಿಂಗ್ ನಿಗದಿಪಡಿಸ**ಲಾಗಿದೆ. ನಿಗದಿಪಡಿಸಿರುವ **ಕೌನ್ಸಿ**ಲಿಂಗ್ ದಿನಾಂಕದಂದು ಅಂತಿಮ ಪಟ್ಟಿ [ಹೆಚ್ಚುವರಿ] ಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳು **ಹಾ**ಜರಾಗದಿದ್ದಲ್ಲಿ, ಕೌನ್ಸಿಲಿಂಗ್ ನಂತರ ಖಾಲಿ **ಉ**ಳಿಯುವ, ಹು.ವಿ.ಸ.ಕಂ.ನಿ. ವ್ಯಾಪ್ತಿಯ ಯಾವುದಾದರೂ ಕಛೇರಿಗೆ **ಅಭ್ಯರ್ಥಿ**ಗಳನ್ನು **ನಿಯೋಜಿಸಲಾಗು**ವುದು. ಕೌನ್ಸಿಲಿಂಗ್ **ನಿಗದಿ**ಪಡಿಸಿರುವ ದಿನಾಂಕವನ್ನು **ಹೊ**ರತುಪಡಿಸಿ ಇನ್ಯಾವುದೇ ದಿನಾಂಕದಂದು **ಕೌನ್ಸಿಲಿಂ**ಗ್ **ನಡೆಸಲಾಗು**ವುದಿಲ್ಲ.

ಮುಂದುವರೆದು, ಆಯ್ಕೆಗೊಂಡಿರುವ **ಅಭ್ಯರ್ಥಿ**ಗಳ **ಪೂ**ರ್ವ ಚರಿತ್ರೆಯ **ವರದಿಯನ್ನು ನೀಡುವಂತೆ** ಕೋರಿ **ಅಭ್ಯರ್ಥಿಗಳು ಆನ್**-ಲೈನ್ ಅರ್ಜಿಯಲ್ಲಿ ಒದಗಿಸಿರುವ ವಿಳಾಸದ ವ್ಯಾಪ್ತಿಯ ಜಿಲ್ಲೆಯ **ಪೊಲೀಸ್ ಅಧೀಕ್ಷಕರುಗಳಿಗೆ** ಪತ್ರವನ್ನು ಬರೆಯಲಾಗಿರುತ್ತದೆ. **ಹಾಗೂ** ವಿವಿಧ ಪ್ರವರ್ಗಗಳಡಿಯಲ್ಲಿ ಹಾಗೂ ಸಾಮಾನ್ಯ ವರ್ಗದ ಗ್ರಾಮೀಣ **ವೀಸಲಾತಿ ಕೋಟಾದಡಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳು** ಮೂಲ **ದಾಖಲಾತಿ** ಪರಿಶೀಲನಾ ವೇಳೆಯಲ್ಲಿ ಸಲ್ಲಿಸಿದ್ದ ಮೂಲ ಜಾತಿ / ಆದಾಯ **ಪ್ರಮಾಣ ಪತ್ರವನ್ನು** ಪರಿಶೀಲಿಸಿ, **ಸಿಂಧುತ್ವ ಪ್ರಮಾಣ** ಪತ್ರ **ನೀಡುವಂತೆ** / ಮೇಲು ಸ್ಥರಕ್ಕೆ ಸೇರಿಲ್ಲವೆಂದು ದೃಢಿಪಡಿಸುವಂತೆ ಕೋರಿ **ಸಂಬಂಧಿಸಿದ ಜಿಲ್ಲಾಧಿಕಾರಿರವರಿಗೆ ಪತ್ರ ಬರೆಯಲಾಗಿರುತ್ತದೆ**. ಸದರಿ ಪತ್ರಗಳ ಪ್ರತಿಯನ್ನು ಅಭ್ಯರ್ಥಿಗಳಿಗೆ ಮಾಹಿತಿಗಾಗಿ ರವಾನಿಸಲಾಗಿದೆ. **ಆಯ್ಕೆಗೊಂಡಿರುವ ಅಭ್ಯರ್ಥಿಗಳು ಸಂಬಂಧಿಸಿದ ಪೊಲೀಸ್ ಅಧೀಕ್ಷಕರು** ಹಾಗೂ ಜಿಲ್ಲಾಧಿಕಾರಿ ರವರ ಕಛೇರಿಯಿಂದ ಕೋರುವ ಅಗತ್ಯ ದಾಖಲೆ / **ಮಾಹಿತಿಯನ್ನು ಜರೂರಾಗಿ** ಒದಗಿಸಿ **ಸಹಕರಿಸಬೇಕೆಂದು ತಿಳಿಸಲಾಗಿದೆ**.

ಪ್ರಧಾನ ವ್ಯವಸ್ಥಾಪಕರು
[ಆಡಳಿತ ಮತ್ತು ಮಾಸಂಅ]

**Contact No.: 0836 – 2223867/ 65**
**(Only during Office hours)**
[ಕಛೇರಿ ವೇಳೆಯಲ್ಲಿ ಮಾತ್ರ **10:00 AM to 05:30 PM**]